# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆ: 1/2020</u>

ಅ.ಸಾ. 05

ದೊ.ಸಾ. 09

| | | |
|---|---|---|
| ಸಾಕ್ಷಿಯ ಹೆಸರು | : | ಅನಸೂಯಾ ಭಾರಕಿ |
| ತಂದೆ ಹೆಸರು | : | ಬಸಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಹಂಗರಕಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 10/11/2021 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ</u>**

2018 ರಲ್ಲಿ ನಾನು ಹಂಗರಕಿ ಗ್ರಾಮ ಪಂಚಾಯಿತಿಯ ಅಧ್ಯಕ್ಷಳಾಗಿದ್ದೆ. ಆ ಸಮಯದಲ್ಲಿ ಪ್ರಾಸಾ.1 ಪಂಚಾಯಿತಿಯ ಪಿ.ಡಿ.ಓ., ಆಗಿದ್ದರು. ಪ್ರಾಸಾ.2 ರಿಂದ 4 ಇವರು ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದರು. ನನಗೆ ಚಾಸಾ.7 ಮತ್ತು 8 ರವರ ಪರಿಚಯ ಇದೆ. ಚಾಸಾ.10 ರಿಂದ 12 ಇವರ ಪರಿಚಯವಿದ್ದು, ಆ ಸಮಯದಲ್ಲಿ ಚಾಸಾ.10 ಕಲ್ಲಪ್ಪ ಪಂಚಾಯಿತಿಯ ಉಪಧ್ಯಾಕ್ಷರಾಗಿದ್ದು, ಚಾಸಾ.11 ಮತ್ತು 12 ಪಂಚಾಯಿತಿಯ ಸದಸ್ಯರಾಗಿದ್ದರು. ನನಗೆ ಆರೋಪಿಯ ಪರಿಚಯವಿದೆ.

2. ಸುಮಾರು ಎರಡು ವರ್ಷಗಳ ಹಿಂದೆ ನಾನು ಪಂಚಾಯಿತಿ ಅಧ್ಯಕ್ಷಳಾಗಿದ್ದ ಸಮಯದಲ್ಲಿ ಒಂದು ದಿನ ಪಂಚಾಯಿತಿಯ ದಾಖಲೆ ಸುಟ್ಟಿದೆ ಎಂದು ಪ್ರಾಸಾ.1 ನನಗೆ ಹೇಳಿದ್ದಾನೆ. ಆ ದಿನ ನಾನು ಊರಿನಲ್ಲಿ ಇರಲಿಲ್ಲ. ಹೊಲಕ್ಕೆ ಹೋಗಿದ್ದೆ. ಸದರಿ ದಾಖಲೆಗೆ ಆರೋಪಿ ಬೆಂಕಿ ಹಚ್ಚಿದ್ದಾನೆ ಎಂದು ಪಿ.ಡಿ.ಓ., ಹೇಳಿದ್ದಾರೆ. ಎಷ್ಟು ಗಂಟೆಗೆ ದಾಖಲೆಗಳು ಸುಟ್ಟಿವೆ ಎಂದು ಆತ ಹೇಳಿಲ್ಲ. ಪಂಚಾಯಿತಿಯ ಯಾವ ದಾಖಲೆಗಳನ್ನು ಸುಟ್ಟಿದ್ದಾನೆ ಎಂದು ನನಗೆ ನಿರ್ಧಿಷ್ಠವಾಗಿ ಹೇಳಿಲ್ಲ. ಘಟನೆಯ ಸಮಯದಲ್ಲಿ ಯಾರು ಯಾರು ಇದ್ದರು ಎಂದು ಚಾಸಾ.1 ನನಗೆ ಹೇಳಿಲ್ಲ.

3. ಪೊಲೀಸರು ಘಟನೆಯ ಬಗ್ಗೆ ನನ್ನನ್ನು ವಿಚಾರಣೆ ಮಾಡಿಲ್ಲ ಹಾಗೂ ನನ್ನ ಹೇಳಿಕೆ ಪಡೆದಿಲ್ಲ.

ಎಸ್.ಸಿ. ಸಂಖ್ಯೆ.1/2020

ಅ.ಸಾ. 05

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ</u>**

4. ದಿಃ 15/02/2018 ರಂದು ಮುಂಜಾನೆ ಪಂಚಾಯಿತಿಯ ಸಿಬ್ಬಂದಿಗಳು ಕಚೇರಿಗೆ ಬಂದು ಫೈಲ್ ಗಳನ್ನು ಹೊಂದಿಸಿಟ್ಟು ಚಹಾ ಕುಡಿಯಲು ಹೋಗಿ ಬರುವಾಗ ಆರೋಪಿ ಪಂಚಾಯಿತಿಯ ಕಚೇರಿಯ ಒಳಗೆ ನುಗ್ಗಿ ಕೆಲವು ಫೈಲ್‌ಗಳನ್ನು ಪಂಚಾಯಿತಿಯ ಹೊರಗೆ ಹಾಕಿ ಬೆಳಿಗ್ಗೆ 10.45 ಗಂಟೆಗೆ ಸದರಿ ಫೈಲ್‌ಗಳಿಗೆ ಬೆಂಕಿ ಹಚ್ಚಿದ ಹಾಗೂ ಅದರಲ್ಲಿಯ ಕೆಲವು ದಾಖಲಗೆಳು ಭಾಗಶಃ ಸುಡುತ್ತಿರುವಾಗ ಪಂಚಾಯಿತಿಯ ಸಿಬ್ಬಂದಿಗಳು ನೀರು ಬೆಂಕಿ ಆರಿಸಿದರು ಎನ್ನುವ ವಿಷಯವನ್ನು ಸಿಬ್ಬಂದಿಗಳಿಂದ ತಿಳಿದು ಪಿಡಿಓ ನನಗೆ ಮಾಹಿತಿ ಕೊಟ್ಟಿದ್ದಾನೆ ಅನ್ನುವುದು ಸರಿಯಲ್ಲ. ವಿಷಯ ತಿಳಿದು ನಾನು ಕಚೇರಿಗೆ ಹೋಗಿ ನೋಡಿದಾಗ ಕಡತಗಳು ಬೆಂಕಿ ಹತ್ತಿ ಭಾಗಶಃ ಸುಟ್ಟಿದ್ದನ್ನು ಪರಿಶೀಲಿಸಿದ್ದೇನೆ ಅನ್ನುವುದು ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಈಗ ನನಗೆ ಓದಿ ತೋರಿಸಿದಂತೆ ನಿಶಾನೆ.ಪಿ.6 ರಂತೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿಗೆ ನಮ್ಮ ಗ್ರಾಮದಲ್ಲಿ ಒಂದು ಧಾಬಾ ಇದೆ. ಸದರಿ ಧಾಬಾಕ್ಕೆ ಪಂಚಾಯಿತಿಯಿಂದ ಪರವಾನಿಗೆ ಪಡೆದಿಲ್ಲ. ಪಿ.ಡಿ.ಓ.,ರವರು ಆರೋಪಿಗೆ ಲೈಸನ್ಸ ತೆಗೆದುಕೊಳ್ಳಲು ಒತ್ತಾಯಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಮ್ಮ ಗ್ರಾಮದವನಿದ್ದು ಅವನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ.ಎನ್ ಹೆಚ್ ಟಿ ವಕೀಲರಿಂದಃ</u>**

5. ಪಿ.ಡಿ.ಓ., ಪೊಲೀಸರಿಗೆ ದೂರು ಕೊಟ್ಟ ವಿಷಯ ನನಗೆ ಗೊತ್ತಿದೆ. ಸುಟ್ಟ ಮರುದಿನ ಆರೋಪಿ ಪಂಚಾಯಿತಿ ದಾಖಲೆಗಳಿಗೆ ಬೆಂಕಿ ಹಚ್ಚಿದ್ದಾನೆಂದು ನನಗೆ ಪಿ.ಡಿ.ಓ., ಮಾಹಿತಿ ಕೊಟ್ಟಿದ್ದಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ದಿಃದೀ 16/02/2018 ರಂದು ಪಿಡಿಓ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಇರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

**<u>ಮರುವಿಚಾರಣೆ:</u>** ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

11/11s/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.